**ಚಾಸಾಃ 12 ಪ್ರಾಸಾಃ 9**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ: 299/2024**

ಹೆಸರು :ದಿಲೀಪ್ ಜಿ.ಆರ್

ತಂದೆಯ ಹೆಸರು :ರಾಜೇಗೌಡ

ಪ್ರಾಯ :41 ವರ್ಷ

ಉದ್ಯೋಗ :ಪಿ.ಎಸ್.ಐ, ಅರಣ್ಯ ಸಂಚಾರಿ ದಳ,

ವಾಸ :ಮಂಗಳೂರು.

**ದಿನಾಂಕ 16.06.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು ಅಕ್ಟೋಬರ್ 2021 ರಿಂದ ಜೂನ್ 2023 ರವರೆಗೆ ಸುಳ್ಯ ಪೋಲೀಸ್ ಠಾಣೆಯಲ್ಲಿ ಪಿ.ಎಸ್.ಐ ಆಗಿ ಕರ್ತವ್ಯ ನಿರ್ವಹಿಸಿದ್ದೇನೆ.

ದಿ. 22.1.2023 ರಂದು ಈ ಪ್ರಕರಣದ ಕಡತವನ್ನು ಪ್ರಾಸಾ-6 ರವರಿಂದ ಪಡೆದುಕೊಂಡು ತನಿಖೆ ಮುಂದುವರೆಸಿದ್ದೇನೆ. ಆ ದಿನ ಬೆಳಿಗ್ಗೆ 9 ಗಂಟೆಯ ಸಮಯದಲ್ಲಿ ಪ್ರಾಸಾ-1, ಪ್ರಾಸಾ-5, ಪ್ರಾಸಾ-6 ರವರನ್ನು ಕರೆದುಕೊಂಡು ಘಟನಾ ಸ್ಥಳಕ್ಕೆ ಭೇಟಿ ನೀಡಿದ್ದು ಅಲ್ಲಿಗೆ ಪಂಚ ಸಾಕ್ಷಿದಾರರಾದ ಪ್ರಾಸಾ-3 ಹಾಗೂ ಚಾಸಾ-4 ರವರನ್ನು ಬರಮಾಡಿಕೊಂಡು, ನೋಟೀಸು ನೀಡಿ ಅವರ ಸಮಕ್ಷಮ ಸ್ಥಳ ಪರಿಶೀಲನೆ ಮಾಡಿದ್ದೇನೆ. ಆ ಸ್ಥಳವನ್ನು ಪ್ರಾಸಾ-1 ರವರು ತೋರಿಸಿಕೊಟ್ಟಿದ್ದು, ಅಲ್ಲಿ ನಾನು ಬೆಳಿಗ್ಗೆ 10 ಗಂಟೆಯವರೆಗೆ ಮಹಜರ್ ಜರುಗಿಸಿದ್ದೇನೆ. ಅದೇ ಸಮಯದಲ್ಲಿ ಘಟನಾ ಸ್ಥಳದ ಕರಡು ನಕ್ಷೆಯನ್ನು ಹಾಗೂ ಪೋಟೋಗಳನ್ನು ತೆಗೆಸಿದ್ದೇನೆ.

ನಾನು ಸ್ಥಳದಲ್ಲಿ ಜರುಗಿಸಿದ ಮಹಜರನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-2(ಸಿ) ಎಂದು ಗುರುತಿಸಲಾಯಿತು. ನಾನು ಸ್ಥಳದಲ್ಲಿ ತಯಾರಿಸಿದ ಕರಡುನಕ್ಷೆಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-3 ಎಂದು ಗುರುತಿಲಾಗಿದ್ದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ-3(ಸಿ) ಎಂದು ಗುರುತಿಸಲಾಯಿತು. ನಾನು ಸ್ಥಳದಲ್ಲಿ ತೆಗೆಸಿದ ಫೋಟೋಗಳನ್ನು ಈಗ ನೋಡುತ್ತಿದ್ದು, ಅವುಗಳನ್ನು ಈಗಾಗಲೇ ನಿಪಿ-5 ಮತ್ತು 6 ಎಂದು ಗುರುತಿಸಲಾಗಿದೆ. ಮಹಜರ್ ಜರುಗಿಸಿದಾಗ ರಸ್ತೆ ಬದಿಯ ವಿದ್ಯುತ್ ಕಂಬ ನೆಲದಿಂದ 4 ಅಡಿ ಎತ್ತರದಲ್ಲಿ ಜಖಂಗೊಂಡಿರುವುದು ಕಂಡು ಬಂತು. ಇದಲ್ಲದೇ ಕಾರಿನ ಬಿಡಿಭಾಗಗಳ ಚೂರುಗಳು ಅಲ್ಲಿ ಬಿದ್ದಿರುವುದು ಕಂಡು ಬಂತು. ಕಾರು ವಿದ್ಯುತ್ ಕಂಬಕ್ಕೆ ಡಿಕ್ಕಿಯಾಗಿದ್ದರಿಂದ ಕಾರು ಪಲ್ಟಿಯಾಗಿ ಅದರಿಂದ ಸುರಿದ ಆಯಿಲ್ ಡಾಂಬಾರು ರಸ್ತೆಯ ಮೇಲೆ ಬಿದ್ದಿರುವುದು ಕಂಡು ಬಂತು.

ತದನಂತರ ಠಾಣೆಗೆ ಹಿಂತಿರುಗಿ ಠಾಣಾ ಆವರಣದಲ್ಲಿ ನಿಲ್ಲಿಸಿದ್ದ ಕೆಎಲ್-60-ಎಂ-9148ರ ನಂಬರಿನ ಮಾರುತಿ 800 ಕಾರನ್ನು, ಎರಡು ಗಂಡು ಕರುಗಳನ್ನು ಪಂಚಸಾಕ್ಷಿದಾರರಾದ ಪ್ರಾಸಾ-3 ಹಾಗೂ ಚಾಸಾ-5 ರವರ ಸಮಕ್ಷಮ ಬೆಳಿಗ್ಗೆ 10.30 ರಿಂದ 11.30 ರ ಸಮಯದಲ್ಲಿ ಮಹಜರ್ ಕ್ರಮ ಜರುಗಿಸಿ ವಶಪಡಿಸಿಕೊಂಡಿದ್ದೇನೆ. ಆ ಕಾರನ್ನು ಹಾಗೂ ಗಂಡು ಕರುಗಳನ್ನು ಪ್ರಾಸಾ-1 ರವರು ನನಗೆ ತೋರಿಸಿಕೊಟ್ಟಿದ್ದಾರೆ. ನಾನು ವಶಪಡಿಸಿಕೊಂಡ ಜಾನುವಾರುಗಳು ಹಾಗೂ ಕಾರನ್ನು ಮಾಲು ಪಟ್ಟಿ ಸಂಃ 11/2023 ರಲ್ಲಿ ನಮೂದಿಸಿ ಪುತ್ತೂರಿನ ಉಪವಿಭಾಗಾಧಿಕಾರಿಗಳ ನ್ಯಾಯಾಲಯಕ್ಕೆ ನಿವೇದಿಸಿಕೊಂಡಿದ್ದೇನೆ. ನಾನು ಠಾಣಾ ಆವರಣದಲ್ಲಿ ಜರುಗಿಸಿದ ಮಹಜರಿನ ನೈಜಪ್ರತಿಯನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ-4 ಎಂದು ಗುರುತಿಸಲಾಗಿದೆ. ಅದರಲ್ಲಿ ನನ್ನ ಸಹಿ ಇದೆ.

ತದನಂತರ 1ನೇ ಆರೋಪಿಯ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿದ್ದೇನೆ. ತನ್ನನ್ನು ಕರೆದುಕೊಂಡು ಹೋದರೆ ಜಾನುವಾರುಗಳನ್ನು ತುಂಬಿದ ಸ್ಥಳವನ್ನು ತೋರಿಸಿಕೊಡುತ್ತೇನೆಂದು ಆತ ತನ್ನ ಸ್ವಇಚ್ಛಾ ಹೇಳಿಕೆಯಲ್ಲಿ ಹೇಳಿದ್ದಾನೆ. ನಂತರ 1ನೇ ಆರೋಪಿಯನ್ನು, ಪ್ರಾಸಾ–5 ಮತ್ತು 6 ರವರನ್ನು ಕರೆದುಕೊಂಡು ಆಲೆಟ್ಟಿ ರಸ್ತೆಯ ಗುರುಂಪು ಎನ್ನುವ ಸ್ಥಳಕ್ಕೆ ಮದ್ಯಾಹ್ನ 12.15 ಕ್ಕೆ ಹೋದೆ. ಆ ಸ್ಥಳವನ್ನು 1ನೇ ಆರೋಪಿ ತೋರಿಸಿಕೊಟ್ಟ. ಅಲ್ಲಿಗೆ ನಾನು ಪ್ರಾಸಾ–3 ಹಾಗೂ ಚಾಸಾ–5 ರವರನ್ನು ಬರಮಾಡಿಕೊಂಡು ಅವರ ಸಮಕ್ಷಮ ಆ ಸ್ಥಳವನ್ನು ಪರಿಶೀಲನೆ ಮಾಡಿ ಮಹಜರ್ ಜರುಗಿಸಿದ್ದೇನೆ. ಸದರಿ ಮಹಜರನ್ನು ನಾನು ಈಗ ನೋಡುತ್ತಿದ್ದು ಅದನ್ನು ನಿಪಿ–19 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–19(ಎ) ಎಂದು ಗುರುತಿಸಲಾಯಿತು. ಆ ಸ್ಥಳದಲ್ಲಿ ನಾನು ಪೋಟೋಗಳನ್ನು ತೆಗೆಸಿದ್ದೇನೆ. ಆ ಪೋಟೋಗಳನ್ನು ನಾನು ಈಗ ನೋಡುತ್ತಿದ್ದು ಅವುಗಳನ್ನು ಈಗಾಗಲೇ ನಿಪಿ–7 ಮತ್ತು 8 ಎಂದು ಗುರುತಿಸಲಾಗಿದೆ. ನಿಪಿ–2, ನಿಪಿ–4 ಹಾಗೂ ನಿಪಿ–19 ರ ಮಹಜರುಗಳನ್ನು ಪ್ರಾಸಾ–5 ರವರು ಬರೆದು ಅವರೇ ಪೋಟೋ ತೆಗೆದಿದ್ದಾರೆ.

ಅದೇ ದಿನ ಪ್ರಾಸಾ–2 ರವರ ಹೇಳಿಕೆಯನ್ನು ಪಡೆದಿದ್ದೇನೆ. ತದನಂತರ 1ನೇ ಆರೋಪಿಗೆ ಭಾ.ಮೋ.ವಾ.ಕಾಯ್ದೆ ಕಲಂ 133 ರಡಿಯಲ್ಲಿ ನೋಟೀಸು ಕೊಟ್ಟು ಅವರಿಂದ ಉತ್ತರವನ್ನು ಪಡೆದಿದ್ದೇನೆ. ನಾನು 1ನೇ ಆರೋಪಿಗೆ ಕೊಟ್ಟ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ನಿಪಿ–20 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–20(ಎ) ಎಂದು ಗುರುತಿಸಲಾಯಿತು. ಆ ನೋಟೀಸಿಗೆ 1ನೇ ಆರೋಪಿ ನೀಡಿದ ಉತ್ತರವನ್ನು ಈಗ ನೋಡುತ್ತಿದ್ದು ಅದನ್ನು ನಿಪಿ–21 ಎಂದು ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–21(ಎ) ಎಂದು ಗುರುತಿಸಲಾಯಿತು.

ಅದೇ ದಿನ ನಾನು ಪ್ರಾಸಾ–5 ರವರಿಂದ ಮಹಜರಿಗೆ ಸಂಬಂಧಿಸಿದಂತೆ ಪೋಟೋಗಳನ್ನು, ಸಿ.ಡಿ ಹಾಗೂ ಭಾ.ಸಾ.ಅ ಕಲಂ 65(ಬಿ) ರಡಿಯಲ್ಲಿ ದೃಢೀಕರಣ

ಪತ್ರವನ್ನು ಪಡೆದುಕೊಂಡಿದ್ದೇನೆ. ಆ ದೃಢೀಕರಣ ಪತ್ರವನ್ನು ನಾನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–13 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–13(ಬಿ) ಎಂದು ಗುರುತಿಸಲಾಯಿತು. ಫ್ರಾಸಾ–5 ರವರು ನೀಡಿದ ಸಿ.ಡಿಯನ್ನು ನಾನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ–14 ಎಂದು ಗುರುತಿಸಲಾಗಿದೆ.

ತಂದನಂತರ 1ನೇ ಆರೋಪಿಯ ವಿರುದ್ಧ ದಸ್ತಗಿರಿ ಕ್ರಮ ಕೈಗೊಂಡು ಆತನನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿದ್ದೇನೆ. ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಜಾನುವಾರುಗಳನ್ನು ಪರೀಕ್ಷಿಸಿ ವರದಿ ನೀಡುವಂತೆ ದಿ. 23.1.2023 ರಂದು ಸುಳ್ಯದ ಪಶುವೈದ್ಯಾಧಿಕಾರಿಗೆ ಮನವಿ ಪತ್ರ ಸಲ್ಲಿಸಿದ್ದೇನೆ. 1ನೇ ಆರೋಪಿಗೆ ಸಂಬಂಧಿಸಿದಂತೆ ದಿ. 28.1.2023 ರಂದು ಸುಳ್ಯದ ಕೆ.ವಿ.ಜಿ ಆಸ್ಪತ್ರೆಯಿಂದ ಗಾಯದ ಪ್ರಮಾಣ ಪತ್ರವನ್ನು ಪಡೆದುಕೊಂಡಿದ್ದೇನೆ. ಆ ಗಾಯದ ಪ್ರಮಾಣ ಪತ್ರವನ್ನು ನಾನು ಈಗ ನೋಡುತ್ತಿದ್ದು, ಅದನ್ನು ಈಗಾಗಲೇ ನಿಪಿ–17 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–17(ಬಿ) ಎಂದು ಗುರುತಿಸಲಾಯಿತು. ನಂತರ ಈ ಪ್ರಕರಣದ ತನಿಖೆಯನ್ನು ಚಾಸಾ–13 ರವರಿಗೆ ವಹಿಸಿಕೊಟ್ಟಿದ್ದೇನೆ. ನಾನು ವಿಚಾರಣೆ ಗೊಳಪಡಿಸಿದ 1ನೇ ಆರೋಪಿಯನ್ನು ನೋಡಿ ಗುರುತಿಸುತ್ತೇನೆ. ಆತ ನ್ಯಾಯಾಲಯದಲ್ಲಿ ಹಾಜರಿದ್ದಾನೆ.

ನಾನು ಪಂಚಸಾಕ್ಷಿದಾರರಿಗೆ ಕೊಟ್ಟ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ಈಗಾಗಲೇ 11 ಎಂದು ಗುರುತಿಸಲಾಗಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–11(ಬಿ) ಎಂದು ಗುರುತಿಸಲಾಯಿತು. ನಾನು ಫ್ರಾಸಾ–3 ಹಾಗೂ ಚಾಸಾ–5 ರವರಿಗೆ ಕೊಟ್ಟ ನೋಟೀಸನ್ನು ಈಗ ನೋಡುತ್ತಿದ್ದು ಅದನ್ನು ನಿಪಿ–22 ಎಂದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–22(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ ಎಂ.ವಿ.ಜಿ ವಕೀಲರಿಂದಃ**

ಈ ಪ್ರಕರಣದ ಕೃತ್ಯ 21.2.2023 ರಂದು ರಾತ್ರಿ 11.30 ರ ಸಮಯದಲ್ಲಿ ನಡೆದಿದೆ. ನಾನು ಘಟನಾ ಸ್ಥಳಕ್ಕೆ 22.1.2023 ರಂದು ಹೋಗಿದ್ದೆ. ನಾನು ಘಟನಾ ಸ್ಥಳಕ್ಕೆ ಭೇಟಿ ನೀಡಿದ ಸಮಯದಲ್ಲಿ ಸ್ಥಳದಲ್ಲಿ ಅಪಘಾತಕ್ಕೊಳಪಟ್ಟ ವಾಹನ ಇರಲಿಲ್ಲ. ಅದರಂತೆ ನಾನು ಸ್ಥಳಕ್ಕೆ ಭೇಟಿ ನೀಡಿದ ಸಮಯದಲ್ಲಿ ಜಾನುವಾರುಗಳು ಅಲ್ಲಿ ಇರಲಿಲ್ಲ.

ಕಾರನ್ನು, ಜಾನುವಾರುಗಳನ್ನು ಫ್ರಾಸಾ–1 ರವರು ಠಾಣಾ ಆವರಣಕ್ಕೆ ತಂದಿದ್ದರು. ಜಾನುವಾರುಗಳನ್ನು ಹಾಗೂ ಕಾರನ್ನು ಠಾಣೆಗೆ ಒಪ್ಪಿಸಿದ್ದೇನೆ ಎಂದು ನಿಪಿ–1 ರಲ್ಲಿ ಉಲ್ಲೇಖವಿಲ್ಲ. ಕಾರನ್ನು ಹಾಗೂ ಜಾನುವಾರುಗಳನ್ನು ಠಾಣೆಗೆ ಒಪ್ಪಿಸಿದ ಬಗ್ಗೆ ಯಾವುದೇ ಸಾಕ್ಷಿದಾರರ ಹೇಳಿಕೆಯಲ್ಲಿ ಉಲ್ಲೇಖವಿಲ್ಲ. ನಿಪಿ–1ರ ದೂರನ್ನು 22.1.2023 ರಂದು ರಾತ್ರಿ 12.05 ರ ಸಮಯದಲ್ಲಿ ಸ್ವೀಕರಿಸಲಾಗಿದೆ.

ನಮ್ಮ ಠಾಣೆಯಿಂದ ಘಟನಾ ಸ್ಥಳಕ್ಕೆ ಸುಮಾರು 2 ಕಿ.ಮೀ ಅಂತರವಿದೆ. ಘಟನೆಯ ಬಗ್ಗೆ ವಿಚಾರ ತಿಳಿದ ತಕ್ಷಣ ನಮ್ಮ ಠಾಣೆಯಿಂದ ಸಿಬ್ಬಂದಿಗಳು ಸ್ಥಳಕ್ಕೆ ಹೋಗಿದ್ದರು. ಘಟನಾ ಸ್ಥಳದಿಂದ ಕಾರನ್ನು ಹಾಗೂ ಜಾನುವಾರುಗಳನ್ನು ಯಾರು ಠಾಣಾ ಆವರಣಕ್ಕೆ ತಂದರು ಎನ್ನುವ ಬಗ್ಗೆ ಈ ಪ್ರಕರಣದ ಕಡತದಲ್ಲಿ ಯಾವುದೇ ಉಲ್ಲೇಖವಿಲ್ಲ. ಫ್ರಾಸಾ–2 ರವರು ಹಿಂದೂ ಜಾಗರಣಾ ವೇದಿಕೆಯ ಪದಾಧಿಕಾರಿ ಎಂದರೆ ಸರಿ. ಅವರ ವಿರುದ್ಧ ದನ ಸಾಗಾಟದ ವಿಚಾರದಲ್ಲಿ ಹಲವಾರು ಪ್ರಕರಣಗಳು ದಾಖಲಾಗಿವೆ ಎಂದರೆ ಸಾಕ್ಷಿ ಅವರು ರೌಡಿ ಶೀಟರ್ ಆಗಿದ್ದು, ಬೇರೆ ಪ್ರಕರಣಗಳು ಅವರ ವಿರುದ್ಧ ದಾಖಲಾಗಿವೆ ಎಂದು ಉತ್ತರಿಸುತ್ತಾರೆ.

ಫ್ರಾಸಾ–2 ರವರು ನಮ್ಮ ಠಾಣೆಯ ಖಾಯಂ ಸಾಕ್ಷಿದಾರರು ಎಂದರೆ ಸರಿಯಲ್ಲ. ನನ್ನ ಪ್ರಕಾರ ಆ ಜಾನುವಾರುಗಳ ಮೌಲ್ಯ ಸುಮಾರು ರೂ.5,000/–. ಈ ಪ್ರಕರಣದಲ್ಲಿ ಜಾನುವಾರುಗಳು ಹೊರ ರಾಜ್ಯಕ್ಕೆ ಸಾಗಾಟವಾಗಿಲ್ಲ. ನಿಪಿ–7 ಮತ್ತು 8 ರ

ಪೋಟೋಗಳ ಪ್ರಕಾರ ಸೇತುವೆಗೆ ತಾಗಿಕೊಂಡಿರುವ ರಸ್ತೆಯ ಬದಿಯಲ್ಲಿ ಜಾನುವಾರುಗಳನ್ನು ಕಾರಿಗೆ ತುಂಬಿಸಲಾಗಿದೆ. 1ನೇ ಆರೋಪಿ ನೀಡಿದ್ದಾನೆಂದು ಹೇಳುವ ಸ್ವಇಚ್ಛಾ ಹೇಳಿಕೆಯಲ್ಲಿ 21.1.2023 ರಂದು ಸಂಜೆ 6 ಗಂಟೆಯ ಸಮಯದಲ್ಲಿ ಎರಡು ಬೀಡಾಡಿ ದನಗಳು ಸುಳ್ಯ ಗುರುಂಪು ಎಂಬಲ್ಲಿನ ಪಯಸ್ವಿನಿ ನದಿಯ ಆಲೆಟ್ಟಿ ಬ್ರಿಡ್ಜ್ ಕೆಳಗೆ ಮೇಯುತ್ತಿರುವುದು ಕಂಡು ಬಂತೆಂದು ಹೇಳಿರುವ ಬಗ್ಗೆ ನಮೂದು ಇದೆ ಎಂದರೆ ಸರಿ.

ಸದರಿ ಬ್ರಿಡ್ಜ್ ನಿಂದ 30–40 ಮೀ ಕೆಳಗೆ ಪಯಸ್ವಿನಿ ನದಿ ಹರಿಯುತ್ತದೆ ಎಂದರೆ ಸಾಕ್ಷಿ 30–40 ಅಡಿ ಕೆಳಗೆ ಹರಿಯುತ್ತದೆ ಎಂದು ಉತ್ತರಿಸುತ್ತಾರೆ. ಅಲ್ಲಿಂದ ಜಾನುವಾರುಗಳನ್ನು ಎಳೆದುಕೊಂಡು ರಸ್ತೆ ಬದಿ ತರಲಾಗಿದೆ. ಆ ಜಾನುವಾರುಗಳನ್ನು ರಸ್ತೆಯ ಬದಿಗೆ ಹೇಗೆ ತರಲಾಯಿತು ಎನ್ನುವ ಬಗ್ಗೆ 1ನೇ ಆರೋಪಿಯ ಸ್ವ ಇಚ್ಛಾ ಹೇಳಿಕೆಯಲ್ಲಿ ಉಲ್ಲೇಖವಿಲ್ಲ. ಅಷ್ಟು ಕೆಳಗಿನಿಂದ ದನ ಕರುಗಳನ್ನು ಎಳೆದುಕೊಂಡು ಬರುವಾಗ ಸಹಜವಾಗಿ ಅವುಗಳಿಗೆ ನೋವುಂಟಾಗುವ ಸಾಧ್ಯತೆ ಇದೆ ಎಂದರೆ ಸರಿಯಲ್ಲ. ಆ ಸ್ಥಳದ ಹತ್ತಿರದಲ್ಲಿ ವಾಸದ ಮನೆಗಳು ಇವೆ ಎಂದರೆ ಸರಿ.

ನಾವು ಸ್ಥಳಕ್ಕೆ ಹೋದಾಗ ಆ ಮನೆಯ ವಾಸಿಗಳು ಅಲ್ಲಿಗೆ ಬಂದಿಲ್ಲ. ಅಷ್ಟು ಕೆಳಭಾಗದಿಂದ ಜಾನುವಾರುಗಳನ್ನು ಎಳೆದುಕೊಂಡು ಬರುವಾಗ ಸಹಜವಾಗಿ ಅವು ಕಿರುಚಾಡುತ್ತವೆ ಎಂದರೆ ಸರಿಯಲ್ಲ. ಆ ಜಾನುವಾರುಗಳು ಅಕ್ಕಪಕ್ಕದ ಮನೆಯವರಿಗೆ ಸೇರಿದ ಜಾನುವಾರುಗಳೇ ಎಂದು ನಾನು ಸ್ಥಳೀಯರನ್ನು ವಿಚಾರಿಸಿದ್ದೇನೆ. ಆ ಜಾನುವಾರುಗಳು ತಮ್ಮದಲ್ಲ ಎಂದು ಆ ಮನೆಯ ವಾಸಿಗಳು ತಿಳಿಸಿದ್ದಾರೆ. ನಿಪಿ–19 ಕ್ಕೆ ಸಹಿ ಮಾಡಿದ ಸಾಕ್ಷಿದಾರರು ಸ್ಥಳೀಯರಲ್ಲ ಎಂದರೆ ಸಾಕ್ಷಿ ಆಲೆಟ್ಟಿ ಗ್ರಾಮದವರು ಎಂದು ಉತ್ತರಿಸುತ್ತಾರೆ.

ಘಟನಾ ಸ್ಥಳಕ್ಕೆ ಹೋಗಬೇಕಾದರೆ ನಿಪಿ–19 ರಲ್ಲಿ ನಮೂದಿಸಿದ ಸ್ಥಳವನ್ನು ದಾಟಿ ಹೋಗಬೇಕು ಎಂದರೆ ಸರಿ. ನಾನು ಘಟನಾ ಸ್ಥಳಕ್ಕೆ ಹೋಗುವ ಪೂರ್ವದಲ್ಲಿ

ಜಾನುವಾರುಗಳನ್ನು ಎಲ್ಲಿಂದ ಕಾರಿಗೆ ತುಂಬಿಸಲಾಗಿದೆ ಎನ್ನುವ ಬಗ್ಗೆ ಮಾಹಿತಿ ಪಡೆದಿದ್ದೆ. ಸ್ಥಳಕ್ಕೆ ಹೋಗುವ ಪೂರ್ವದಲ್ಲಿ ಜಾನುವಾರುಗಳನ್ನು ಕಾರಿಗೆ ತುಂಬಿಸಿದ ಸ್ಥಳವನ್ನು ನಾನು ಗಮನಿಸಿದ್ದೇನೆ. ನಿಪಿ-2 ರ ಮಹಜರನ್ನು ಜರುಗಿಸಿದ ಸುಮಾರು 2 ಗಂಟೆಗಳ ನಂತರ ನಿಪಿ- 19 ರ ಮಹಜರನ್ನು ಜರುಗಿಸಲಾಗಿದೆ.

ಸ್ಥಳ ಮಹಜರು ಜರುಗಿಸಿದ ನಂತರ ಅದೇ ಮಾರ್ಗವಾಗಿ ಠಾಣೆಗೆ ಬಂದು ಪುನಃ ಜಾನುವಾರುಗಳನ್ನು ಕಾರಿಗೆ ತುಂಬಿದ ಸ್ಥಳಕ್ಕೆ ಹೋಗಿದ್ದೇವೆ. ಸ್ಥಳ ಮಹಜರು ಜರುಗಿಸಿದ ನಂತರ ವಾಪಾಸು ಬರುವಾಗ ಕಾರಿಗೆ ಜಾನುವಾರುಗಳನ್ನು ತುಂಬಿಸಿದ ಸ್ಥಳದಲ್ಲಿ ಮಹಜರು ಜರುಗಿಸಲು ನನಗೆ ಯಾವುದೇ ತೊಂದರೆ ಇರಲಿಲ್ಲ. ನಿಪಿ-2 ರ ಮಹಜರಿಗೆ ಸಾಕ್ಷಿದಾರರಾಗಿ ಸಹಿ ಮಾಡಿದ ವ್ಯಕ್ತಿಗಳು ಆ ಸ್ಥಳದಿಂದ ಸುಮಾರು 2 ಕಿ.ಮೀ ಅಂತರದಲ್ಲಿ ವಾಸವಿರುವ ವ್ಯಕ್ತಿಗಳಾಗಿದ್ದಾರೆ. ಜಾನುವಾರುಗಳನ್ನು ಕಾರಿಗೆ ತುಂಬಿಸಿದ ಸ್ಥಳದ ಹತ್ತಿರದಲ್ಲಿರುವ ಸೇತುವೆಯಿಂದ ಘಟನಾ ಸ್ಥಳ ಸಮಾರು 1 ½ ಯಿಂದ 2 ಕಿ.ಮೀ ಅಂತರದಲ್ಲಿದೆ. ಜಾನುವಾರುಗಳನ್ನು ಕಾರಿಗೆ ತುಂಬಿಸಿದ ಸ್ಥ ಳದ ಹತ್ತಿರದಲ್ಲಿರುವ ಸೇತುವೆಯಿಂದ ಘಟನಾ ಸ್ಥಳ ಸುಮಾರು 500 ಮೀ ಅಂತರದಲ್ಲಿದೆ ಎಂದರೆ ಸರಿಯಲ್ಲ.

ಘಟನಾ ಸ್ಥಳಕ್ಕೆ ತಲುಪುವ ಪೂರ್ವದಲ್ಲಿ ಹಲವಾರು ವಾಸದ ಮನೆಗಳು ಇವೆ ಎಂದರೆ ಸರಿ. ಮಹಜರಿಗೆ ಸಾಕ್ಷಿದಾರರಾಗಿ ಸಹಿ ಮಾಡಿದ ವ್ಯಕ್ತಿಗಳು ಘಟನಾ ಸ್ಥಳದಿಂದ ಮುಂದೆ ಸುಮಾರು 4 ಕಿ.ಮೀ ಅಂತರದಲ್ಲಿ ವಾಸವಾಗಿದಾದರೆ ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರಿದು ಸುಮಾರು 2 ಕಿ.ವೀ ಅಂತರದಲ್ಲಿ ವಾಸವಾಗಿದ್ದಾರೆ ಎಂದು ಉತ್ತರಿಸುತ್ತಾರೆ. ಪ್ರಾಸಾ-2, 3, ಚಾಸಾ-4 ಮತ್ತು 5 ರವರು ಸ್ನೇಹಿತರು ಹಾಗೂ ಭಜರಂಗ ದಳದ ಕಾರ್ಯಕರ್ತರು ಎಂದರೆ ಸರಿಯಲ್ಲ.

ನಿಪಿ- 19 ರ ಮಹಜರಿಗೆ ಸಾಕ್ಷಿದಾರರಾಗಬೇಕೆಂದು ಆ ಸಾಕ್ಷಿದಾರರಿಗೆ ಸ್ಥಳದಲ್ಲಿಯೇ ನೋಟೀಸು ಕೊಟ್ಟಿದ್ದೇನೆ. ಆ ಸಾಕ್ಷಿದಾರರು ಆಲೆಟ್ಟಿ ಗ್ರಾಮದಿಂದ

ಬೈಕಿನಲ್ಲಿ ಬಂದಿದ್ದರು. ಆ ಇಬ್ಬರು ಸಾಕ್ಷಿದಾರರನ್ನು ಹೊರತು ಪಡಿಸಿ ಅವರಿಗಿಂತ ಮುಂಚಿತವಾಗಿ ಬೇರೆ ವ್ಯಕ್ತಿಗಳನ್ನು ಸಾಕ್ಷಿದಾರರಾಗಬೇಕೆಂದು ಕೇಳಿಲ್ಲ. ನನಗೆ ಫ್ರಾಸಾ–3 ಹಾಗೂ ಚಾಸಾ–5 ರವರ ಪರಿಚಯ ಮೊದಲಿನಿಂದ ಇರಲಿಲ್ಲ. ನಿಪಿ–4 ರ ಮಹಜರಿಗೆ ಫ್ರಾಸಾ–3 ಹಾಗೂ ಚಾಸಾ–4 ರವರು ಸಾಕ್ಷಿದಾರರಾಗಿ ಸಹಿ ಮಾಡಿದ್ದಾರೆ. ಆ ಸಾಕ್ಷಿದಾರರಿಗೆ ಠಾಣೆಯ ಬಳಿ ನೋಟೀಸು ನೀಡಲಾಗಿದೆ. ಫ್ರಾಸಾ–3 ಮತ್ತು ಚಾಸಾ–4 ರವರಿಗೆ ಸ್ಥಳ ಮಹಜರಿಗೆ ಸಾಕ್ಷಿದಾರರಾಗಬೇಕೆಂದು ನಾನೇ ನೋಟೀಸು ಕೊಟ್ಟಿದ್ದೆ.

ಬೆಳಿಗ್ಗೆ 9 ರಿಂದ 10 ಗಂಟೆಯ ಸಮಯ ತುಂಬಾ ವಾಹನ ದಟ್ಟಣೆ ಇರುವ ಸಮಯ ಎಂದರೆ ಸರಿಯಲ್ಲ. ಫ್ರಾಸಾ–2 ರವರು ಫ್ರಾಸಾ–3, ಚಾಸಾ–4 ಮತ್ತು 5 ರವರನ್ನು ಠಾಣೆಗೆ ಕರೆಸಿ ಮಹಜರುಗಳಿಗೆ ಸಹಿ ಮಾಡಿಸಿದ್ದಾರೆ ಎಂದರೆ ಸರಿಯಲ್ಲ. ಫ್ರಾಸಾ–1 ರವರು ಭಜರಂಗದಳದ ಕಾರ್ಯಕರ್ತರು ಎಂದರೆ ಸಾಕ್ಷಿ ಅದು ತನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಕಾರಿನಲ್ಲಿ ಜಾನುವಾರುಗಳನ್ನು ಸಾಗಿಸಲಾಗುತ್ತಿತ್ತು ಎಂದು ಹೇಳಲು ಆ ಕಾರಿನಲ್ಲಿ ಯಾವುದಾದರೂ ಕುರುಹುಗಳು ಕಂಡು ಬಂದಿವೆಯೇ ಎಯಿ ಕೇಳಿದ ಪ್ರಶ್ನೆಗೆ ಸಾಕ್ಷಿ ಕಂಡು ಬಂದಿದೆ ಎಂದು ಉತ್ತರಿಸುತ್ತಾರೆ. ಆ ಕುರುಹುಗಳನ್ನು ನಿಪಿ–4ರ ಮಹಜರಿನಲ್ಲಿ ನಾನು ನಮೂದಿಸಿಲ್ಲ. ಆ ಕುರುಹುಗಳನ್ನು ಮಹಜರಿನಲ್ಲಿ ನಮೂದಿಸುವುದು ಅಗತ್ಯ ಎಂದರೆ ಸರಿ.

1ನೇ ಆರೋಪಿ ನನ್ನ ಸಮಕ್ಷಮ ಯಾವುದೇ ಸ್ವಇಚ್ಛಾ ಹೇಳಿಕೆಗಳನ್ನು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವ ರೀತಿಯಲ್ಲಿ ಆತನ ಸ್ವಇಚ್ಛಾ ಹೇಳಿಕೆಯನ್ನು ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ಜಾನುವಾರುಗಳು ಅಪಘಾತಕ್ಕೊಳಪಟ್ಟ ಕಾರಿನಲ್ಲಿ ಇರಲಿಲ್ಲ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ವಶಪಡಿಸಿಕೊಳ್ಳಲಾಗಿದೆ ಎಂದು ಹೇಳುವ ಜಾನುವಾರುಗಳಿಗೆ ಯಾರೂ ವಾರಸುದಾರರು ಇಲ್ಲ.

ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಜಾನುವಾರುಗಳನ್ನು ಪೊಲೀಸರು ಠಾಣಾ ಆವರಣಕ್ಕೆ ತಂದಿಲ್ಲ. ನನ್ನ ತನಿಖಾ ಕಾಲದಲ್ಲಿ ಆ ಜಾನುವಾರುಗಳನ್ನು ಠಾಣಾ ಆವರಣಕ್ಕೆ ಯಾರು ತಂದಿದ್ದು ಎನ್ನುವುದು ನನಗೆ ಗೊತ್ತಾಗಲಿಲ್ಲ. ರಸ್ತೆಯಲ್ಲಿ ಸಂಚರಿಸುತ್ತಿದ್ದ ಬೀಡಾಡಿ ದನಗಳನ್ನು ಚಾಸಾ–2 ಹಾಗೂ ಅವರ ಸಂಗಡಿಗರು ತಂದು ಠಾಣೆಗೆ ಒಪ್ಪಿಸಿದ್ದಾರೆ ಎಂದರೆ ಸರಿಯಲ್ಲ. ಆರೋಪಿತರು ಕೇರಳದವರಾಗಿದ್ದು, ಮುಸ್ಲಿಂ ಸಮುದಾಯಕ್ಕೆ ಸೇರಿದವರಾದ ಕಾರಣ ಅವರ ವಾಹನ ಅಪಘಾತಕ್ಕೊಳಪಟ್ಟಾಗ ತಪ್ಪು ಕಲ್ಪನೆಯಿಂದ ಅವರು ಜಾನುವಾರುಗಳನ್ನು ಕಾರಿನಲ್ಲಿ ಸಾಗಿಸುತ್ತಿದ್ದರು ಎಂದು ಸುಳ್ಳು ದೂರು ನೀಡಲಾಗಿದೆ ಎಂದರೆ ಸರಿಯಲ್ಲ.

ಫ್ರಾಸಾ1 ರವರು ನಿಪಿ–1 ರ ದೂರನ್ನು ಕೊಟ್ಟಿಲ್ಲ, ಈ ಪ್ರಕರಣಕ್ಕೋಸ್ಕರ ನಮ್ಮ ಠಾಣೆಯಲ್ಲಿ ಅದನ್ನು ನಮಗೆ ಬೇಕಾದಂತೆ ಬರೆಸಿಕೊಳ್ಳಲಾಗಿದೆ ಎಂದರೆ ಸರಿಯಲ್ಲ. ಆರೋಪಿತರಿಗೂ ಹಾಗೂ ಈ ಪ್ರಕರಣದಲ್ಲಿ ವಶಪಡಿಸಿಕೊಂಡ ಜಾನುವಾರುಗಳಿಗೂ ಯಾವುದೇ ಸಂಬಂಧವಿಲ್ಲ ಎಂದರೆ ಸರಿಯಲ್ಲ. ಅಪಘಾತಕ್ಕೊಳಪಟ್ಟ ಸ್ಥಳ ಸುಳ್ಯದಿಂದ ಕೇರಳಕ್ಕೆ ಹೋಗುವ ರಸ್ತೆ ಎಂದರೆ ಸರಿ. ಸುಳ್ಳು ದೂರಿನ ಆಧಾರದ ಮೇರೆಗೆ ತಪ್ಪು ಕಲ್ಪನೆಯಿಂದ ನಾನು ತನಿಖೆ ಕೈಗೊಂಡಿದ್ದೇನೆ ಎಂದರೆ ಸರಿಯಲ್ಲ. ನಾನು ಸಾಕ್ಷಿದಾರರ ಹೇಳಿಕೆಯನ್ನು ಪಡೆದಿಲ್ಲ ಎಂದರೆ ಸರಿಯಲ್ಲ.

ನಿಪಿ–5 ರಿಂದ 10 ಪೋಟೋಗಳ ಮೇಲೆ ದಿನಾಂಕ, ಸಮಯ ನಮೂದು ಇಲ್ಲ. ನಿಪಿ–5 ರಿಂದ 10 ರಪೋಟೋಗಳನ್ನು ಫ್ರಾಸಾ–5 ರವರ ಮೊಬೈಲ್ ನಿಂದ ತೆಗೆಯಲಾಗಿದೆ. ನಮ್ಮ ಠಾಣೆಗೆ ತನಿಖೆಗೋಸ್ಕರ ಇಲಾಖೆಯಿಂದ ಕ್ಯಾಮರಾಗಳನ್ನು ಕೊಟ್ಟಿದ್ದಾರೆ ಎಂದರೆ ಸಾಕ್ಷಿ ಅದು ಸುಸ್ಥಿತಿಯಲ್ಲಿ ಇರಲಿಲ್ಲ ಎಂದು ಉತ್ತರಿಸುತ್ತಾರೆ. ಅದನ್ನು ದುರಸ್ತಿಗಾಗಿ ಕೊಟ್ಟಿದ್ದೇವೆ. ಇಲಾಖೆಯಿಂದ ಕೊಟ್ಟ ಕ್ಯಾಮರಾ ಸುಸ್ಥಿತಿಯಲ್ಲಿ ಇಲ್ಲದ ಕಾರಣ ಫ್ರಾಸಾ–5 ರವರ ಮೊಬೈಲ್ ನಿಂದ ಪೋಟೋ ತೆಗೆಯಲಾಗಿದೆ ಎಂದು ಯಾವುದೇ ಮಹಜರಿನಲ್ಲಿ ಉಲ್ಲೇಖವಿಲ್ಲ. ಅದರಿಂದಾಗಿ ನಾನು ಹೇಳಿದ ದಿನ, ಸ್ಥಳ

ಹಾಗೂ ಸಮಯದಲ್ಲಿ ಮಹಜರುಗಳನ್ನು, ಕರಡು ನಕ್ಷೆಯನ್ನು ಸ್ಥಳದಲ್ಲಿ ತಯಾರಿಸಿಲ್ಲ ಎಂದರೆ ಸರಿಯಲ್ಲ. ಪ್ರಾಸಾ-5 ರವರು ನಮ್ಮ ಠಾಣೆಯ ಬರಹಗಾರು ಎಂರದೆ ಸಾಕ್ಷಿ ತನಿಖಾ ಸಹಾಯಕರು ಎಂದು ಉತ್ತರಿಸುತ್ತಾರೆ. ಪ್ರಾಸಾ-5 ರವರು ಠಾಣೆಯಲ್ಲಿಯೇ ತಯಾರು ಮಾಡಿದ ದಾಖಲೆಗಳಿಗೆ ನಾನು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ಬೇರೆ ದಿನ ಪೋಟೋಗಳನ್ನು ತೆಗೆದು ಈ ಪ್ರಕರಣಕ್ಕೋಸ್ಕರ ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಾನು ಹೇಳುವಂತೆ ಆರೋಪಿತರು ಯಾವುದೇ ತಪ್ಪು ಮಾಡಿಲ್ಲ ಎಂದರೆ ಸರಿಯಲ್ಲ. ಪ್ರಾಸಾ 6 ರವರು ಖಾಲಿ ಕಾಗದಕ್ಕೆ ಪ್ರಾಸಾ-1 ರವರ ಸಹಿ ಪಡೆದು ಪ್ರಕರಣಕ್ಕೆ ಪೂರಕವಾಗುವ ರೀತಿಯಲ್ಲಿ ದೂರನ್ನು ತಯಾರಿಸಿದ್ದಾರೆ ಎಂದರೆ ಸರಿಯಲ್ಲ. ಸುಳ್ಳು ದೂರಿನನ್ವಯ ದಾಖಲಿಸಿದ ಸುಳ್ಳು ಪ್ರಕರಣಕ್ಕೆ ಪೂರಕವಾಗಿ ಸುಳ್ಳು ದಾಖಲಾತಿಗಳನುನ ನಾನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು 2ನೇ ಆರೋಪಿ ಪರ ಶ್ರೀ ಸಿ.ಕೆ.ಎಂ ವಕೀಲರಿಂದಃ**

2ನೇ ಆರೋಪಿ ಪರ ವಕೀಲರು ಈ ಪ್ರಕರಣದಲ್ಲಿ 1ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅನುಕರಿಸುತ್ತಾರೆ.

**ಮರುವಿಚಾರಣೆ ಇರುವುದಿಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ